# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 180 |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 16.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸೂಕ್ಷ್ಮ ಸಣ್ಣ ಮಧ್ಯಮ ಕೈಗಾರಿಕೆಗಳನ್ನು ಪ್ರಾರಂಭಿಸಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದಿಂದ ಕೈಗಾರಿಕಾ ಶೆಡ್ ಮತ್ತು ನಿವೇಶನಗಳನ್ನು ಮಂಜೂರು ಮಾಡಲು ಅನುಸರಿಸುತ್ತಿರುವ ಮಾನದಂಡಗಳೇನು; ಸದರಿ ನಿಗಮದಿಂದ ಈ ಉದ್ಯಮಗಳಿಗೆ ಇದುವರೆಗೂ ಹಂಚಿಕೆಯಾಗಿರುವ ಕೈಗಾರಿಕಾ ಶೆಡ್ ಮತ್ತು ನಿವೇಶನಗಳು ಎಷ್ಟು; (ಜಿಲ್ಲಾವಾರು ವರ್ಷವಾರು ಪೂರ್ಣ ಮಾಹಿತಿ ನೀಡುವುದು) | • ರಾಜ್ಯದಲ್ಲಿ ಸೂಕ್ಷ್ಮ, ಸಣ್ಣ, ಮಧ್ಯಮ ಕೈಗಾರಿಕೆಗಳನ್ನು ಪ್ರಾರಂಭಿಸಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದಿಂದ ಕೈಗಾರಿಕಾ ಶೆಡ್ ಮತ್ತು ನಿವೇಶನಗಳನ್ನು ಮಂಜೂರು ಮಾಡಲು ಅನುಸರಿಸುತ್ತಿರುವ ಷರತ್ತು ಮತ್ತು ನಿಬಂಧನೆಗಳ (ಮಾನದಂಡ) ವಿವರಗಳನ್ನು **ಅನುಬಂಧ-'ಅ'** ರಲ್ಲಿ ನೀಡಲಾಗಿದೆ.<br><br>• ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದಿಂದ ಈ ಉದ್ಯಮಗಳಿಗೆ ಇದುವರೆವಿಗೂ ಹಂಚಿಕೆಯಾಗಿರುವ ಕೈಗಾರಿಕಾ ಶೆಡ್ ಮತ್ತು ನಿವೇಶನಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ - 'ಆ'** ರಲ್ಲಿ ನೀಡಲಾಗಿದೆ. |
| ಆ) | ಈ ರೀತಿ ಮಂಜೂರು ಮಾಡಿದ ನಿವೇಶನ ಮತ್ತು ಕೈಗಾರಿಕೆ ಶೆಡ್‌ಗಳಲ್ಲಿ ನಿರುದ್ಯೋಗಿ ಯುವಕರಿಗೆ ಮಂಜೂರು ಮಾಡಿರುವ ಸಂಖ್ಯೆ ಎಷ್ಟು ಪ್ರಮಾಣದಲ್ಲಿ ರಿಯಾಯಿತಿ ನೀಡಲಾಗಿದೆ; (ಪೂರ್ಣ ವಿವರ ನೀಡುವುದು) | • ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮವು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ನಿರುದ್ಯೋಗಿ ಯುವಕರು ಒಳಗೊಂಡಂತೆ ಕೈಗಾರಿಕಾ ಮಳಿಗೆ / ನಿವೇಶನಗಳ ಹಂಚಿಕೆದಾರರಿಗೆ ಈ ಕೆಳಕಂಡ ರಿಯಾಯಿತಿ/ ಸೌಲಭ್ಯಗಳನ್ನು ನೀಡುತ್ತಿದೆ.<br><br>1. ಸಣ್ಣ ಕೈಗಾರಿಕೆ ಸ್ಥಾಪಿಸಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತವು ಸರ್ಕಾರದ ಹೊಸ ಕೈಗಾರಿಕಾ ನೀತಿ 2020-25 ರಂತೆ ಮಳಿಗೆ / ನಿವೇಶನಗಳ ಹಂಚಿಕೆಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಹಂಚಿಕೆದಾರರಿಗೆ ಶೇ.24.10 ರಷ್ಟು ಮೀಸಲಾತಿಯನ್ನು ಅನುಸರಿಸಲಾಗುತ್ತಿದೆ. ಈ ಪೈಕಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಮಹಿಳೆಯರಿಗೆ ಕೈಗಾರಿಕಾ ಮಳಿಗೆ / ನಿವೇಶನಗಳ ಹಂಚಿಕೆಯಲ್ಲಿ ಶೇಕಡ 25 ರಷ್ಟು ಮೀಸಲಾತಿಯನ್ನು ಸಹ ನೀಡಲಾಗುತ್ತಿದೆ.<br><br>2. ನಿಗಮದ ವತಿಯಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಸಹಾಯಧನವನ್ನು 2016-17ನೇ ಸಾಲಿನಿಂದ, ಸರ್ಕಾರದ ಆದೇಶ ಸಂಖ್ಯೆ: ಸಿಐ 81 ಸಿಎಸ್‌ಸಿ |

| | | |
|---|---|---|
| | | 2016, ದಿನಾಂಕ: 27.06.2016 ರಂತೆ ಮಳಿಗೆ / ನಿವೇಶನಗಳ ಮೌಲ್ಯದ ಶೇ.50 ರಷ್ಟು ಸಹಾಯಧನ ವಿಸ್ತರಿಸಲಾಗಿರುತ್ತದೆ.<br><br>3. ನಂತರ, ಸರ್ಕಾರದ ಆದೇಶ ಸಂಖ್ಯೆ: ಸಿಐ 76 ಎಸ್ಎಸ್ಐ 2019 ದಿನಾಂಕ 16.02.2021 ಆದೇಶದಂತೆ 2019-20ನೇ ಸಾಲಿನಲ್ಲಿ 50% ಸಹಾಯಧನ ಯೋಜನೆಯಡಿಯಲ್ಲಿ ಈ ಕೈಗಾರಿಕಾ ನಿವೇಶನಗಳನ್ನು ಪಡೆದು ನಿಯಮಾನುಸಾರ ಒಡಂಬಡಿಕೆ ಮತ್ತು ಪಾವತಿ ಇತ್ಯಾದಿ ಮಾಡಿರುವ ಪ್ರಕರಣಗಳನ್ನು ಹೊರತುಪಡಿಸಿ, ದಿನಾಂಕ: 01.04.2019 ರಿಂದ ಅನ್ವಯವಾಗುವಂತೆ ಮಳಿಗೆ / ನಿವೇಶನಗಳ ಮೌಲ್ಯದ ಶೇ.75 ರಂತೆ ವಿಸ್ತರಿಸಿ ಇದುವರೆಗೂ ಸಹಾಯಧನ ವಿಸ್ತರಿಸಲಾಗುತ್ತಿದೆ.<br><br>4. ಸರ್ಕಾರದ ಎಸ್.ಸಿ.ಪಿ / ಎಸ್.ಟಿ.ಪಿ ಯೋಜನೆಯ ಅನುದಾನದಲ್ಲಿ ಮಳಿಗೆಗಳನ್ನು ನಿರ್ಮಾಣ ಮಾಡಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಹಂಚಿಕೆ ಮಾಡಿ, ಮಳಿಗೆಯ ನಿವೇಶನದ ಬೆಲೆಯ ಶೇಕಡ 75 ರಷ್ಟು ಹಾಗೂ ಮಳಿಗೆ ನಿರ್ಮಾಣದ ವೆಚ್ಚಕ್ಕೆ ಶೇಕಡ 90 ರಷ್ಟು ಸಹಾಯಧನ ನೀಡಲಾಗುತ್ತಿದೆ.<br><br>5. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದರಿಗೆ ಹಂಚಿಕೆ ಪತ್ರದಲ್ಲಿನ ಮೊತ್ತದ ಶೇ.10 ರಷ್ಟು ಮೊತ್ತವನ್ನು ಮಾತ್ರ ಪಾವತಿಸಿ, ನಂತರ ನಿವೇಶನಗಳನ್ನು ಫಲಾನುಭವಿಗೆ ಸ್ವಾಧೀನ ನೀಡಿ, ಉಳಿದ ಶೇ.15ರಷ್ಟು ಮೊತ್ತವನ್ನು ಸ್ವಾಧೀನ ಪತ್ರ ವಿತರಿಸಿದ ದಿನಾಂಕದಿಂದ 8 ತ್ರೈಮಾಸಿಕ ಸಮ ಕಂತುಗಳಲ್ಲಿ ಬಡ್ಡಿಯೊಂದಿಗೆ ಫಲಾನುಭವಿಯಿಂದ ಪಡೆಯಲಾಗುವುದು.<br><br>ಸರ್ಕಾರದ ಹೊಸ ಕೈಗಾರಿಕಾ ನೀತಿ 2020-25 ರಂತೆ ಕೆ.ಎಸ್.ಎಸ್.ಐ.ಡಿ.ಸಿ. ಸಂಸ್ಥೆಯು ಅಭಿವೃದ್ಧಿಪಡಿಸುವ ಕೈಗಾರಿಕಾ ವಸಾಹತುಗಳಲ್ಲಿ ಅಲ್ಪಸಂಖ್ಯಾತ, ಹಿಂದುಳಿದ ವರ್ಗ (ವರ್ಗ-1 ಮತ್ತು ವರ್ಗ-2ಎ), ವಿಕಲಚೇತನ ಉದ್ದಿಮೆದಾರರಿಗೆ ಕನಿಷ್ಟ ಶೇಕಡ 10 ರಷ್ಟು ನಿವೇಶನ / ಶೆಡ್‌ಗಳನ್ನು ಮೀಸಲಿಡಲಾಗುತ್ತಿದೆ. ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಖಾಲಿ ಇರುವ ನಿವೇಶನ / ಮಳಿಗೆ / ಫ್ಲಾಟ್ಸ್ / ಅಂಗಡಿ ಹಾಗೂ ಗೋದಾಮುಗಳ ಹಂಚಿಕೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲೆಮಾರಿ ಪಂಗಡ, ವಿಕಲಚೇತನರು, ಅಲ್ಪಸಂಖ್ಯಾತರು ಪ್ರವರ್ಗಗಳಲ್ಲಿ ಒಟ್ಟಾರೆ ಶೇಕಡ 30 ರಷ್ಟು ಮಹಿಳೆಯರಿಗಾಗಿ ಮೀಸಲಾತಿ ನೀಡಲಾಗುತ್ತಿದೆ. |
| ಇ) | ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಸಣ್ಣ ಕೈಗಾರಿಕೆ ಸ್ಥಾಪನೆ ಮಾಡುವವರಿಗೆ ಶೇಕಡಾ 50 ರ ರಿಯಾಯಿತಿ ದರದಲ್ಲಿ ನಿವೇಶನ ಮತ್ತು ಶೆಡ್‌ಗಳನ್ನು ನೀಡಲು | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಸರ್ಕಾರಿ ತಿದ್ದುಪಡಿ ಆದೇಶ ಸಂಖ್ಯೆ: ಸಿಐ 76 ಎಸ್ಎಸ್ಐ 2019, ದಿನಾಂಕ: 16.02.2021ರ ಆದೇಶದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುವ ಜಮೀನಿನ ಹಂಚಿಕೆ ದರದಲ್ಲಿ ಶೇ.75ರ ರಿಯಾಯಿತಿಯನ್ನು ನೀಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ. |

| | | |
|---|---|---|
| | ಸರ್ಕಾರಕ್ಕಿರುವ ತೊಂದರೆಗಳೇನು; ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು; (ಪೂರ್ಣ ವಿವರ ನೀಡುವುದು) | |
| ಈ) | ಸೂಕ್ಷ್ಮ, ಸಣ್ಣ, ಮತ್ತು ಮಧ್ಯಮ ಉದ್ಯಮಗಳಿಗೆ (ಎಂಎಸ್ಎಂಇ) ಇ-ಕಾಮರ್ಸ್ ಮಾರ್ಕೆಟಿಂಗ್ ವೇದಿಕೆಯನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು; ಈ ಬಗ್ಗೆ ಕೇಂದ್ರ ಸರ್ಕಾರದಿಂದ ದೊರೆತಿರುವ ನೆರವು ಮತ್ತು ಸೌಲಭ್ಯಗಳು ಯಾವುವು? (ಪೂರ್ಣ ವಿವರ ನೀಡುವುದು) | ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ (ಎಂಎಸ್ಎಂಇ) ಇ-ಕಾಮರ್ಸ್ ಮಾರ್ಕೆಟಿಂಗ್ ವೇದಿಕೆಯನ್ನು ಪ್ರಾರಂಭಿಸಲು ರಾಜ್ಯ ಸರ್ಕಾರವು ಆನ್‌ಲೈನ್ ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಉತ್ತೇಜನ ನೀಡುತ್ತಿದೆ.<br><br>ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಕುಶಲಕರ್ಮಿಗಳು ಉತ್ಪಾದಿಸಿದ ಉತ್ಪನ್ನಗಳ ಮಾರುಕಟ್ಟೆಗಾಗಿ ಇ-ಕಾಮರ್ಸ್ ಮಾರ್ಕೆಟಿಂಗ್ ವೇದಿಕೆಯನ್ನು ಕಲ್ಪಿಸಲು ಫ್ಲಿಪ್ ಕಾರ್ಟ್ ಮತ್ತು ಅಮೆಜಾನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡು ವ್ಯವಹಾರ ನಡೆಸುತ್ತಿದೆ.<br><br>ಅಲ್ಲದೇ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಕುಶಲಕರ್ಮಿಗಳು ಉತ್ಪಾದಿಸಿದ ಉತ್ಪನ್ನಗಳ ಮಾರುಕಟ್ಟೆಗಾಗಿ ತನ್ನದೇ ಆದ ಇ-ಕಾಮರ್ಸ್ ವೈಬ್ ಸೈಟ್‌ನ್ನು ಹೊಂದಿರುತ್ತದೆ.<br><br>ಮುಂದುವರೆದು, ಕೇಂದ್ರ ಸರ್ಕಾರವು ಈಗಾಗಲೇ Open Network for Digital Commerce ವೇದಿಕೆಯನ್ನು ಸ್ಥಾಪಿಸಿರುತ್ತದೆ. |

ಸಿಐ 162 ಸಿಎಸ್‌ಸಿ 2024

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು.

ಅನುಬಂಧ - 'ಅ'

## ನಿಯಮ ಹಾಗೂ ನಿಬಂಧನೆಗಳು:

1. ಮಳಿಗೆ/ನಿವೇಶನಗಳನ್ನು "ಹೇಗಿದೆಯೋ ಹಾಗೆ" (As is where is basis) 10 ವರ್ಷಗಳ ಗುತ್ತಿಗೆ ಕರಾರು ಆಧಾರದಲ್ಲಿ ಹಂಚಿಕೆ ಮಾಡಲಾಗುತ್ತದೆ.
2. ಹಂಚಿಕೆ ಸಮಯದಲ್ಲಿ ನೀಡಿದ ಮಳಿಗೆ/ನಿವೇಶನ/ಗೋದಾಮುಗಳ ಅಳತೆಯು ವ್ಯತ್ಯಯವಾಗುವ ಸಂಭವವಿದ್ದು, ಹಂಚಿಕೆದಾರರು ಸ್ವಾಧೀನ ಪಡೆಯುವ ಮುನ್ನ ನಿಖರವಾದ ಅಳತೆಯನ್ನು ಖಚಿತ ಪಡಿಸಿಕೊಂಡು ಆ ಪ್ರಕಾರ ಮಳಿಗೆ/ನಿವೇಶನದ ಮೌಲ್ಯವನ್ನು ಹಾಗೂ ನಿಗದಿತ ವಿದ್ಯುತ್ ಮಾರ್ಗಶುಲ್ಕವನ್ನು ಪಾವತಿಸಬೇಕು.
3. ನಿಗದಿತ ಅರ್ಜಿ ನಮೂನೆಯನ್ನು ದ್ವಿಪ್ರತಿಯಲ್ಲಿ ಕ.ರಾ.ಸ.ಕೈ.ಅ.ನಿ.ನಿ.ದ ಕೇಂದ್ರ ಹಾಗೂ ವಿಭಾಗೀಯ/ ಶಾಖಾ ಕಛೇರಿಗಳಿಂದ ಪಡೆಯಬಹುದು ಹಾಗೂ ಕ.ರಾ.ಸ.ಕೈ.ಅ.ನಿ.ನಿ.ಯ ವೆಬ್‌ಸೈಟ್ **www.kssidc.co.in** ನಿಂದಲೂ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.
4. ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆ ಜೊತೆ ರೂ. 5000 (ತೆರಿಗೆ ಸೇರಿದಂತೆ) ಅರ್ಜಿ ಶುಲ್ಕವಾಗಿ ಮತ್ತು ರೂ. 2,360 ಪರಿಶೀಲನಾ ಶುಲ್ಕವಾಗಿ (ತೆರಿಗೆ ಸೇರಿದಂತೆ) ಡಿಮಾಂಡ್ ಡ್ರಾಫ್ಟ್ ಸಲ್ಲಿಸಬೇಕು.
5. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ರೂ. 2,500 (ತೆರಿಗೆ ಸೇರಿದಂತೆ) ಅರ್ಜಿ ಶುಲ್ಕವಾಗಿ ಮತ್ತು ರೂ. 1,180 ಪರಿಶೀಲನಾ ಶುಲ್ಕವಾಗಿ (ತೆರಿಗೆ ಸೇರಿದಂತೆ) ಡಿಮಾಂಡ್ ಡ್ರಾಫ್ಟ್ ಸಲ್ಲಿಸಬೇಕು.
6. ಮುಂಗಡ ಠೇವಣಿ ಮೊತ್ತವನ್ನು ಪ್ರಕಟಣೆಯಲ್ಲಿ ತೋರಿಸಿರುವ ಮೊತ್ತಕ್ಕೆ ಡಿಮಾಂಡ್ ಡ್ರಾಫ್ಟ್ ಸಲ್ಲಿಸಬೇಕು.
   - ❖ ಮೇಲ್ಕಂಡಂತೆ ಎರಡು ಡಿ.ಡಿ.ಗಳಲ್ಲಿ ಒಂದನ್ನು ಮುಂಗಡ ಠೇವಣಿಗಾಗಿ ಹಾಗೂ ಮತ್ತೊಂದನ್ನು ಅರ್ಜಿ ಶುಲ್ಕ ಮತ್ತು ಪರಿಶೀಲನಾ ಶುಲ್ಕ ಎರಡನ್ನು ಸೇರಿಸಿ ಅರ್ಜಿಯೊಂದಿಗೆ ಯಾವ ಕೈಗಾರಿಕಾ ವಸಾಹತುವಿನ ಮಳಿಗೆ/ ನಿವೇಶನ/ ಗೋದಾಮುಗಳ ಹಂಚಿಕೆ ಕೋರಿ ಸಲ್ಲಿಸಲ್ಪಡುವುದೋ, ಅಲ್ಲಿಗೆ ಹಣ ಸಂದಾಯವಾಗುವಂತೆ ಕೆ.ಎಸ್.ಎಸ್.ಐ.ಡಿ.ಸಿ ಲಿಮಿಟೆಡ್, ವಿಭಾಗೀಯ /ಶಾಖಾ ಕಛೇರಿಯ ಹೆಸರಿಗೆ ಡಿ.ಡಿ. ಯನ್ನು ಸಲ್ಲಿಸುವುದು
   - ❖ ಅರ್ಜಿದಾರರು ಭರ್ತಿ ಮಾಡಿದ ಅರ್ಜಿಯನ್ನು ಮಳಿಗೆ/ನಿವೇಶನದ ಮೂಲ ಮೌಲ್ಯದ ಶೇಕಡಾ 10 ರಷ್ಟರ ಮುಂಗಡ ಠೇವಣಿ ಹಣದ ಡಿಮ್ಯಾಂಡ್ ಡ್ರಾಫ್ಟ್‌ನೊಂದಿಗೆ ಸಲ್ಲಿಸುವುದು.. (ಹಂಚಿಕೆಯಾಗದಿದ್ದಲ್ಲಿ ಮುಂಗಡ ಠೇವಣಿ ಮೊತ್ತದ ಮೇಲೆ ಯಾವುದೇ ಬಡ್ಡಿಯನ್ನು ನೀಡದೇ ಮರು ಪಾವತಿಸಲಾಗುವುದು ಮತ್ತು ಹಂಚಿಕೆಯಾದಲ್ಲಿ, ನಿವೇಶನ/ಮಳಿಗೆ ಮೌಲ್ಯಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು)
   - ❖ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಅರ್ಜಿಯ ಜೊತೆಗೆ ಮಳಿಗೆ /ನಿವೇಶನದ ಮೌಲ್ಯದ ಶೇಕಡಾ 5 ರಷ್ಟು ಮುಂಗಡ ಠೇವಣಿಯನ್ನು ಸಲ್ಲಿಸುವುದು. (ಹಂಚಿಕೆಯಾಗದಿದ್ದಲ್ಲಿ ಬಡ್ಡಿ ರಹಿತವಾಗಿ ಮರು-ಪಾವತಿಯಾಗುವುದು ಮತ್ತು ಹಂಚಿಕೆಯಾದಲ್ಲಿ, ನಿವೇಶನ/ಮಳಿಗೆ ಮೌಲ್ಯಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು)
   - ❖ ಮಳಿಗೆ/ನಿವೇಶನಗಳ ಹಂಚಿಕೆ ಪಡೆದು, ಮೌಲ್ಯವನ್ನು ನಿಗಧಿತ ಅವಧಿಯಲ್ಲಿ ಪಾವತಿಸಿ, ಸ್ವಾಧೀನ ತೆಗೆದುಕೊಳ್ಳಲು ವಿಫಲರಾದಲ್ಲಿ, ನಿಗಮದ ಮಳಿಗೆ/ನಿವೇಶನಗಳ ಹಂಚಿಕೆ ನಿಯಮಗಳ ಅನ್ವಯ ಹಂಚಿಕೆ ರದ್ದುಪಡಿಸಿ, ಮುಂಗಡ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
7. ಮಳಿಗೆ/ನಿವೇಶನ/ಗೋದಾಮುಗಳನ್ನು ಹಂಚಿಕೆ ಪ್ರಕ್ರಿಯೆ ನಡೆಸುವ ಸಂದರ್ಭದಲ್ಲಿ ಪರಾಮರ್ಶಕ ಸಮಿತಿಯು, ಅರ್ಜಿದಾರರು ಸಲ್ಲಿಸಿದ ದಾಖಲೆಗಳ ಆಧಾರದ ಮೇಲೆ ಅಂಕಗಳನ್ನು ನೀಡಿ ಈ ಅಂಕಗಳ ಆಧಾರದ ಮೇಲೆ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಹಂಚಿಕೆಗೆ ಪರಿಗಣಿಸಲಾಗುತ್ತದೆ. ಆದ್ದರಿಂದ ಇದಕ್ಕೆ ಸಂಬಂಧಿಸಿದ ಈ ಕೆಳಕಂಡ ಪೂರಕ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
   - ❖ ಉದ್ದೇಶಿತ ಕೈಗಾರಿಕೆಯ ವಿವರವಾದ ಯೋಜನಾ ವರದಿ. (ಯೋಜನಾ ವರದಿಯಲ್ಲಿ ಸಲ್ಲಿಸಬೇಕಾದ ವಿವರಗಳನ್ನು ನಿಗಮದ ಹಂಚಿಕೆಗಾಗಿ ಸಲ್ಲಿಸುವ ಅರ್ಜಿಯಲ್ಲಿ ವಿವರವಾಗಿ ವಿವರಿಸಲಾಗಿದೆ).
   - ❖ ಅರ್ಜಿದಾರರು ಈಗಾಗಲೇ ಕೈಗಾರಿಕೆ ನಡೆಸುತ್ತಿದ್ದಲ್ಲಿ, ಸಂಬಂಧಪಟ್ಟ ದಾಖಲೆಗಳು
   - ❖ ಅರ್ಜಿದಾರರು ಸ್ಥಳೀಯರಾಗಿದ್ದಲ್ಲಿ, ಕರ್ನಾಟಕದಲ್ಲಿ 10 ವರ್ಷಕ್ಕಿಂತ ಹೆಚ್ಚು ಅವಧಿ ವಾಸಿಸುತ್ತಿರುವ ಬಗ್ಗೆ ಕಂದಾಯ ಇಲಾಖೆಯಿಂದ ದೃಢೀಕರಣ ಪತ್ರ (Domicile Certificate).ಪಾಲುದಾರಿಕೆ/ಪ್ರೈವೇಟ್ ಲಿಮಿಟೆಡ್ ಕಂಪನಿಯಾದಲ್ಲಿ, ಪಾಲುದಾರರ/ನಿರ್ದೇಶಕರ ವಾಸಿಸುತ್ತಿರುವ ಪ್ರಮಾಣ ಪತ್ರ.
   - ❖ ಯೋಜನಾ ಬಂಡವಾಳ ಹೂಡಿಕೆಗೆ ಇರುವ ಸಾಮರ್ಥ್ಯವನ್ನು ತೋರಿಸಲು ಬ್ಯಾಂಕಿನಿಂದ/ಹಣಕಾಸು ಸಂಸ್ಥೆಯಿಂದ ಸಾಲ ಮಂಜೂರಾತಿ ಒಪ್ಪಿಗೆ ಪತ್ರ ಅಥವಾ ಠೇವಣಿಗಳನ್ನು ಹೊಂದಿದ್ದಲ್ಲಿ, ಈ ಬಗ್ಗೆ ಬ್ಯಾಂಕಿನ ಪ್ರಮಾಣ ಪತ್ರ ಹಾಗೂ ಸಾಲವೆನ್ಸಿ ಪ್ರಮಾಣ ಪತ್ರ.
   - ❖ ಉದ್ಯೋಗ ಕಲ್ಪಿಸುವ ಸಾಮರ್ಥ್ಯದ ವಿವರ.
   - ❖ ಉದ್ದೇಶಿತ ಉತ್ಪಾದನೆಯು ರಫ್ತು ಮಾಡುವ ವಸ್ತು ಅಥವಾ ಆಮದು ಮಾಡಿಕೊಳ್ಳುವ ವಸ್ತುವಿಗೆ ಪರ್ಯಾಯ ವಸ್ತುವಾಗಿದ್ದಲ್ಲಿ, ಸ್ಥಳೀಯ ಸಂಪನ್ಮೂಲಗಳನ್ನು ಬಳಸುವ ಕೈಗಾರಿಕೆ/ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪರ್ಯಾಯ/ಹೈಟೆಕ್ ಕೈಗಾರಿಕೆಗಳು ಆಗಿದ್ದಲ್ಲಿ, ಅವುಗಳನ್ನು ಸ್ಪಷ್ಟೀಕರಿಸುವ ದಾಖಲೆಗಳು.

- ಮಾಲಿನ್ಯ ರಹಿತ ವಸ್ತುವಿನ ಉತ್ಪಾದನೆಯಾದಲ್ಲಿ, ಸದರಿ ಉತ್ಪಾದನೆಯನ್ನು ತೋರಿಸುವ ದಾಖಲೆಗಳು.
- ಅರ್ಜಿದಾರರು ಪ್ರಥಮ ತಲೆಮಾರಿನವರಾಗಿದ್ದಲ್ಲಿ ಸಂಬಂಧಿಸಿದ ದಾಖಲೆಗಳು.
- ಪ್ರಸ್ತುತ ಯೋಜನೆಯು ಸಿ.ಜಿ.ಟಿ.ಎಂ.ಎಸ್.ಇ.(CREDIT GUARANTEE FUND TRUST FOR MICRO AND SMALL ENTERPRISES) ಇವರಿಗೆ ಸಲ್ಲಿಸಿದ್ದಲ್ಲಿ, ಅದರ ವಿವರಗಳು.
- ಪ್ರಸ್ತುತ ಯೋಜನೆಯು ಸಿ.ಜಿ.ಟಿ.ಎಂ.ಎಸ್.ಇ. ಗ್ಯಾರಂಟಿ ಅಡಿ ಇದ್ದಲ್ಲಿ, ಅದಕ್ಕೆ ಸಂಬಂಧಿಸಿದ ದಾಖಲೆಗಳು.
- ರೂ. 100 ಲಕ್ಷಗಳಗಿಂತ ಹೆಚ್ಚಿನ ಯೋಜನಾ ಬಂಡವಾಳ ಹೂಡಿಕೆ ಸಾಮರ್ಥ್ಯ ಹೊಂದಿರುವ ಯೋಜನೆ ಆಗಿದ್ದಲ್ಲಿ, ಅದಕ್ಕೆ ಸಂಬಂಧಿಸಿದ ದಾಖಲೆಗಳು.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಸರ್ಕಾರದ ಕೈಗಾರಿಕಾ ನೀತಿ ಅನ್ವಯ ಹಾಗೂ ನಿಗಮದ ಹಂಚಿಕೆ ನಿಯಮಾವಳಿಗಳನ್ವಯ ಶೇಕಡವಾರು ಮೀಸಲಾತಿ ಪಡೆಯುವುದರಿಂದ, ಮೂಲ ಜಾತಿ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
- ನಿಗಮದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡಲ್ಪಡುವ ಮಳಿಗೆ/ನಿವೇಶನಗಳಿಗೆ ಹಂಚಿಕೆ ಸಂದರ್ಭದಲ್ಲಿಯೇ ಶೇಕಡ 75ರಷ್ಟು ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ ಬಾಕಿ ಉಳಿದ ಶೇ.10ರ (Upfront) ಮೊತ್ತವನ್ನು (ಮುಂಗಡ ಠೇವಣಿ ಸೇರಿಸಿ) ನಿಗಮಕ್ಕೆ ಹಂಚಿಕೆದಾರರು ಪಾವತಿಸಬೇಕಾಗಿದ್ದು, ಉಳಿದ ಶೇಕಡಾ 15 ರಷ್ಟು ನಿವೇಶನ/ಮಳಿಗೆಯ ಮೌಲ್ಯದ ಮೊತ್ತವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ವಾರ್ಷಿಕ ಶೇಕಡಾ 12.5ರ ಬಡ್ಡಿ ದರದೊಂದಿಗೆ ಪಾವತಿಸಲು ಅವಕಾಶವಿರುತ್ತದೆ. ಮುಂದುವರೆದು, ಪಾಲುದಾರಿಕೆ/ಕಂಪನಿ ಘಟಕವಾಗಿದ್ದಲ್ಲಿ ಎಲ್ಲಾ ಪಾಲುದಾರರು/ನಿರ್ದೇಶಕರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವಾಗಿರಬೇಕು.
- ಅರ್ಜಿದಾರರು Pan Card No, Aadhar Card ಪ್ರತಿಗಳನ್ನು ಮತ್ತು Bank a/c No, Branch Name, Place and IFSC Code, Mobile Number ಗಳನ್ನು ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

8. ನಿಗಮವು, ಸರ್ಕಾರದ ಆದೇಶ/ನಿರ್ದೇಶನದನ್ವಯ ಮತ್ತು ಮಂಡಳಿಯು ರೂಪಿಸಿರುವ ಮಾನದಂಡದ ಅನ್ವಯ, ಅರ್ಜಿಗಳನ್ನು ಹಾಗೂ ಸಲ್ಲಿಸಿರುವ ಪೂರಕ ದಾಖಲೆಗಳನ್ನು ಪರಿಶೀಲಿಸಿ, ನಿಯಮಾನುಸಾರ **ನಿವೇಶನಗಳ/ಮಳಿಗೆಗಳ ಹಂಚಿಕೆಗೆ ಪರಿಗಣಿಸಲಾಗುವುದು.** ಆದ್ದರಿಂದ, ಅರ್ಜಿಯೊಂದಿಗೆ ಈ ಕೆಳಗಿನ ದಾಖಲೆಗಳನ್ನು ತಪ್ಪದೇ ಸಲ್ಲಿಸುವುದು

   - ಸಣ್ಣ ಕೈಗಾರಿಕಾ ನೋಂದಣಿ ಪತ್ರ (ಉದ್ಯೋಗ್ ಆಧಾರ್) ಪತ್ರವನ್ನು ಸಲ್ಲಿಸುವುದು.
   - ಉದ್ದೇಶಿತ ಯೋಜನಾ ವರದಿ.
   - ಅರ್ಜಿದಾರರ/ಪಾಲುದಾರರ/ನಿರ್ದೇಶಕರ ವಿದ್ಯಾರ್ಹತೆಯ ಪ್ರಮಾಣ ಪತ್ರ.
   - ಅರ್ಜಿದಾರರು ಉತ್ಪಾದಿಸಿದ ಉತ್ಪನ್ನಗಳನ್ನು ಅಮದು / ರಫ್ತು ಮಾಡುತ್ತಿದ್ದಲ್ಲಿ ಹಾಗೂ ಕಚ್ಚಾ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳುತ್ತಿದ್ದಲ್ಲಿ, ಅದಕ್ಕೆ ಸಂಬಂಧಿಸಿದ ದಾಖಲೆಗಳು/ಸ್ಥಳೀಯ ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದಲ್ಲಿ, ಅದರ ದಾಖಲೆ.
   - ಅರ್ಜಿದಾರರು, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ ವಿಕಲಚೇತನರು / ಅಲ್ಪ ಸಂಖ್ಯಾತರು / ಅಲೆಮಾರಿ ಜನಾಂಗದವರಾಗಿದ್ದಲ್ಲಿ, ಸಂಬಂಧಪಟ್ಟ ತಹಶೀಲ್ದಾರ್‌ರವರ ದರ್ಜೆಗಿಂತ ಕಡಿಮೆ ಇರದ ಸರ್ಕಾರಿ ಪ್ರಾಧಿಕಾರದಿಂದ ಪಡೆದ ಮೂಲ ಜಾತಿ / ಅರ್ಹತಾ ಪ್ರಮಾಣ ಪತ್ರ.
   - ಅರ್ಜಿದಾರರ ಭಾವಚಿತ್ರ (2 ಸಂಖ್ಯೆ ).
   - ಸಂವಿಧಾನದ ಪಾಲುದಾರಿಕೆ/ಖಾಸಗಿ ನಿಯಮಿತ/ಸಾರ್ವಜನಿಕ ನಿಯಮಿತ ಆದಲ್ಲಿ ಸಂಬಂಧಪಟ್ಟ ದೃಢೀಕೃತ ದಾಖಲೆಗಳನ್ನು ಸಲ್ಲಿಸುವುದು.
   - ಅರ್ಜಿದಾರರು ಒಂದು ಮಳಿಗೆ/ನಿವೇಶನಗಳಗಿಂತ ಹೆಚ್ಚಿಗೆ ಅರ್ಜಿ ಹಾಕಲು ಇಚ್ಛಿಸಿದಲ್ಲಿ ಪ್ರತಿ ಮಳಿಗೆ/ನಿವೇಶನಗಳಿಗೆ ಪ್ರತ್ಯೇಕವಾಗಿ ಅರ್ಜಿಯ ಜೊತೆ ಅರ್ಜಿ ಶುಲ್ಕ, ಪರಿಶೀಲನಾ ಶುಲ್ಕ ಹಾಗೂ ಮುಂಗಡ ಠೇವಣಿ ಹಣ ಪಾವತಿಸುವುದು.
   - ಆಯಾ ಕೈಗಾರಿಕಾ ವಸಾಹತುವಿನಲ್ಲಿ ಒಂದು ಕುಟುಂಬಕ್ಕೆ ಒಂದು ಮಳಿಗೆ/ನಿವೇಶನ ಮಾತ್ರ ಹಂಚಿಕೆ ಮಾಡಲಾಗುವುದು.
   - ಹಂಚಿಕೆಯಾದ ನಿವೇಶನ/ಮಳಿಗೆಗಳ ಮೌಲ್ಯವನ್ನು ಹಂಚಿಕೆ ಪತ್ರ ವಿತರಿಸಿದ 60 ದಿನಗಳಲ್ಲಿ ಸಾಮಾನ್ಯ ವರ್ಗದವರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು 90 ದಿನಗಳ ಕಾಲಾವಕಾಶದಲ್ಲಿ ಪಾವತಿಸತಕ್ಕದ್ದು.
   - ನಿಗಮದ ಮಂಡಳಿಯು ಕಾಲಕಾಲಕ್ಕೆ ನಿರ್ದೇಶಿಸುವ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.
   - ಸರ್ಕಾರದ ಆದೇಶದಂತೆ, ನಿಯಮಾನುಸಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ, ಮಹಿಳಾ ಉದ್ಯಮಿ, ಅಲ್ಪಸಂಖ್ಯಾಂತ, ವಿಕಲಚೇತನ, ಹಿಂದುಳಿದ ವರ್ಗ (ವರ್ಗ-1 & ವರ್ಗ-2ಎ), ಮಾಜಿ ಸೈನಿಕರಿಗೆ ಮೀಸಲಾತಿ ಕಲ್ಪಿಸಲಾಗುವುದು.

- ನಿವೇಶನಗಳು /ಮಳಿಗೆಗಳು ಆಯಾ ಕೈಗಾರಿಕಾ ವಸಾಹತುವಿನ ಮುಖ್ಯ ರಸ್ತೆಗಳಿಗೆ ಎದುರು ಇದ್ದಲ್ಲಿ, ಮುಖ್ಯ ರಸ್ತೆ ಹೊಂದಿಕೊಂಡು ಮೂಲೆ ನಿವೇಶನವಾಗಿದ್ದಲ್ಲಿ ಶೇಕಡಾ 10% ರಂತೆ 'ಎ' ಪ್ರವರ್ಗ / ಶೇಕಡಾ 5% ರಂತೆ 'ಬಿ' ಪ್ರವರ್ಗದ ನಿವೇಶನಗಳಿಗೆ ಪ್ರಕಟಿಸಿದ ಬೆಲೆಗಿಂತ ಹೆಚ್ಚಾಗಿ ವಿಧಿಸಲಾಗುವುದು. 'ಸಿ' ಪ್ರವರ್ಗದಲ್ಲಿ ಸ್ಥಾಪಿಸಿರುವ ಕೈಗಾರಿಕಾ ವಸಾಹತುಗಳ ನಿವೇಶನಗಳಿಗೆ ಇದು ಅನ್ವಯಿಸುವುದಿಲ್ಲ.
- ಅರ್ಜಿ ಸಲ್ಲಿಸುವ ಮೊದಲು ಕೈಗಾರಿಕಾ ವಸಾಹತುವಿಗೆ ಭೇಟಿ ನೀಡಿ, ಸ್ಥಳ ಪರಿಶೀಲಿಸಿ ನಿವೇಶನ/ಮಳಿಗೆಯನ್ನು ಪರಿಶೀಲಿಸಿ ಪಡೆಯುವುದು ಅರ್ಜಿದಾರರಿಗೆ ಜವಾಬ್ದಾರಿಯಾಗಿರುತ್ತದೆ.
- ಹಂಚಿಕೆಯಾದ ನಿವೇಶನದಲ್ಲಿ ಯಾವುದೇ ವಿದ್ಯುತ್ ಮಾರ್ಗ ಮತ್ತು ಯು.ಜಿ.ಡಿ. ಹಾದು ಹೋಗಿದ್ದಲ್ಲಿ ಅದನ್ನು ಅವರ ಸ್ವಂತ ಖರ್ಚಿನಲ್ಲಿ ಸ್ಥಳಾಂತರಿಸಲು ಹಂಚಿಕೆದಾರರೇ ಕ್ರಮ ಕೈಗೊಳ್ಳಬೇಕಿರುತ್ತದೆ.
- ಯಾವುದೇ ಒಂದು ನಿಗಧಿತ ಮಳಿಗೆ/ನಿವೇಶನಕ್ಕೆ 6 ಅಥವಾ 6 ಕ್ಕಿಂತ ಹೆಚ್ಚು ಅರ್ಜಿಗಳು ಸ್ವೀಕೃತಗೊಂಡಲ್ಲಿ, ಸದರಿ ನಿವೇಶನ/ಮಳಿಗೆ ಹಂಚಿಕೆಗೆ ಸಲ್ಲಿಸಿರುವ ಅರ್ಜಿದಾರರ ನಡುವೆ ಹರಾಜು ಪ್ರಕ್ರಿಯೆ ಮೂಲಕ ಹಂಚಿಕೆ ಮಾಡಲಾಗುವುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಜಿದಾರರು ಮಳಿಗೆ/ನಿವೇಶನಗಳಿಗೆ ಅರ್ಜಿ ಸಲ್ಲಿಸಿ ನಿಯಮಾನುಸಾರ ಹರಾಜಿನಲ್ಲಿ ಭಾಗವಹಿಸಿ ಯಶಸ್ವಿಯಾದಲ್ಲಿ ನಿಗಮವು ನಿಗದಿಪಡಿಸಿದ ಮೂಲ ಬೆಲೆಯ ಮೊತ್ತವನ್ನು ಪರಿಗಣಿಸಿ, ಸರ್ಕಾರದ ಮಾರ್ಗಸೂಚಿ ಅನ್ವಯ ಶೇ.75ರಷ್ಟು ರಿಯಾಯಿತಿ/ಸಹಾಯಧನವನ್ನು ವಿಸ್ತರಿಸಲಾಗುವುದು.
- ನಿಗಮವು ಅರ್ಜಿ ಜೊತೆ ಪಡೆದಿರುವ ಮುಂಗಡ ಠೇವಣಿ ಮೊತ್ತದ ಮೇಲೆ ಯಾವುದೇ ಬಡ್ಡಿಯನ್ನು ನೀಡುವುದಿಲ್ಲ.
- ಯಾವುದೇ ಮಳಿಗೆ/ನಿವೇಶನ ಹಂಚಿಕೆ ಮಾಡದಿರುವ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ / ಮರು ಪ್ರಕಟಣೆಗೆ ಹೊರಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
- ಆಯಾ ಕೈಗಾರಿಕಾ ವಸಾಹತುಗಳಲ್ಲಿ ಒದಗಿಸಿರುವ ವಿದ್ಯುತ್ ಸಂಪರ್ಕ ಮಾರ್ಗ ಶುಲ್ಕವನ್ನು ಹಂಚಿಕೆದಾರರು ಪಾವತಿಸಬೇಕಾಗುತ್ತದೆ.
- ಅರ್ಜಿದಾರರು ಅರ್ಜಿಯಲ್ಲಿ ನಮೂದಿಸಿದ ವಿದ್ಯುತ್ ಸಂಪರ್ಕ ಬೇಡಿಕೆಗೆ ಸಂಬಂಧ ಅರ್ಜಿಯಲ್ಲಿ ನಮೂದಿಸಿರುವ ನಿರ್ದಿಷ್ಟ ವಿದ್ಯುತ್ ಬೇಡಿಕೆಗೆ (ಹೆಚ್.ಪಿ.)ಗೆ ನಿಗದಿಪಡಿಸುವ ಮೌಲ್ಯ ಪಾವತಿಮಾಡಬೇಕಾಗಿರುತ್ತದೆ. ಹಂಚಿಕೆ ಆದ ನಂತರ ಅರ್ಜಿಯಲ್ಲಿ ನಮೂದಿಸಿರುವ ಬೇಡಿಕೆ ವಿದ್ಯುತ್‌ಗಿಂತ ಕಡಿಮೆ ವಿದ್ಯುತ್ ಬೇಡಿಕೆ ಕುರಿತು ಮನವಿಯನ್ನು ಪರಿಗಣಿಸಲಾಗುವುದಿಲ್ಲ.
- ಹಂಚಿಕೆ ಪತ್ರದಲ್ಲಿ ತಿಳಿಸಿದ ಕಾಲಾವಕಾಶದ ನಂತರ ನಿಗದಿತ ಅವಧಿಯಲ್ಲಿ ನಿವೇಶನ/ಮಳಿಗೆ ಸ್ವಾಧೀನ ಪಡೆಯದಿದ್ದಲ್ಲಿ, ಸ್ವಾಧೀನ ಪಡೆಯುವ ದಿನಾಂಕದಂದು ಪ್ರಚಲಿತ ದರದಂತೆ ನಿವೇಶನದ ಮೌಲ್ಯ ಪಾವತಿ ಮಾಡಬೇಕಾಗಿರುತ್ತದೆ.
- ಮಳಿಗೆ/ನಿವೇಶನ/ಗೋದಾಮುಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಹಂಚಿಕೆಯಾಗದ ಅರ್ಜಿದಾರರಿಗೆ ಹಂಚಿಕೆ ಪ್ರಕ್ರಿಯೆ ಮುಗಿದ ನಂತರ ಮತ್ತು ಅರ್ಜಿಯನ್ನು ಹಿಂಪಡೆಯುವ ಅರ್ಜಿದಾರರಿಗೆ ಮುಂಗಡ ಠೇವಣಿ ಮೊತ್ತವನ್ನು ಮಾತ್ರ ಹಿಂದಿರುಗಿಸಲಾಗುವುದು. ಮುಂದುವರೆದು ಅರ್ಜಿಯ ಜೊತೆಯಲ್ಲಿ ಪಾವತಿಸಿರುವ ಅರ್ಜಿ ಶುಲ್ಕ ಮತ್ತು ಪರಿಶೀಲನಾ ಶುಲ್ಕ ಹಿಂದಿರುಗಿಸುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕರು

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

<u>ಅನುಬಂಧ – 'ಆ'</u>

## ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಹಂಚಿಕೆ ಮಾಡಿರುವ ಮಳಿಗೆ/ಬಹುಮಹಡಿ ಕಟ್ಟಡ/ಅಂಗಡಿ/ಗೋದಾಮು/ನಿವೇಶನಗಳ ಜಿಲ್ಲಾವಾರು ವಿವರ

| ಮ ಸಂ | ಕೈಗಾರಿಕಾ ವಸಾಹತು | ಒಟ್ಟು ವಿಸ್ತೀರ್ಣ ಎಕರೆಗಳಲ್ಲಿ | ಕೈ.ವ. ಸ್ಥಾಪನಾ ವರ್ಷ | ಹಂಚಿಕೆ | | | | |
|---|---|---|---|---|---|---|---|---|
| | | | | ಮಳಿಗೆ | ಬಹುಮಹಡಿ ಕಟ್ಟಡ | ಅಂಗಡಿ | ಗೋದಾಮು | ನಿವೇಶನಗಳು |
| | **ಬೆಂಗಳೂರು – ನಗರ** | | | | | | | |
| 1 | ಜಿಗಣಿ 1ನೇ ಹಂತ | 18.05 | 1994 | 100 | 0 | | 0 | 88 |
| 2 | ಜಿಗಣಿ 2ನೇ ಹಂತ | 16.05 | 1997 | 4 | 0 | | 0 | 74 |
| 3 | ದ್ಯಾವಸಂದ್ರ | 30 | 1977 | 142 | 0 | | 28 | 17 |
| 4 | ಎನ್.ಜಿ.ಇ.ಎಫ್. | 15.16 | 1979 | 54 | | | | 20 |
| 5 | ರಾಜಾಜಿನಗರ | 37 | 1960 | 142 | 20 | | 110 | 8 |
| 6 | ಕಿಯಾನಿಕ್ಸ್ – ವಿದ್ಯುನ್ಮಾನ ನಗರ | 10 | 1983 | 0 | 119 | | | 8 |
| 7 | ವೀರಸಂದ್ರ 1ನೇ ಹಂತ | 14.33 | 1980 | 104 | | | | 2 |
| 8 | ವೀರಸಂದ್ರ 2ನೇ ಹಂತ | 10 | 2001 | 15 | | | | 50 |
| 9 | ಬೊಮ್ಮಸಂದ್ರ 1ನೇ ಹಂತ | 25 | 1985 | 101 | | | | 7 |
| 10 | ಬೊಮ್ಮಸಂದ್ರ 2ನೇ ಹಂತ | 10 | 2000 | 15 | | | | 58 |
| 11 | ಹೆಚ್.ಎ.ಎಲ್. | 2.85 | 1978 | 10 | | | | 0 |
| 12 | ಪೀಣ್ಯ 1ನೇ ಹಂತ | 125 | 1975 | 451 | 12 | | | 129 |
| 13 | ಪೀಣ್ಯ 2ನೇ ಹಂತ | 141.5 | 1979 | 444 | 13 | | | 102 |
| 14 | ಪೀಣ್ಯ 3ನೇ ಹಂತ | 31.84 | 1990 | 126 | 12 | | | 31 |
| | ಒಟ್ಟು | | | 1708 | 176 | 0 | 138 | 594 |
| | **ಬೆಂಗಳೂರು – ಗ್ರಾಮಾಂತರ ಜಿಲ್ಲೆ** | | | | | | | |
| 1 | ಯಲಹಂಕ | 6.15 | 1982 | 40 | | | | 5 |
| 2 | ಕುಂಬಳಗೂಡು | 16 | 1988 | 66 | | | | 14 |
| 3 | ಹೊಸಕೋಟೆ | 16.85 | 1985 | 68 | | | | 31 |
| 4 | ದೊಡ್ಡಬಳ್ಳಾಪುರ | 20.26 | 1984 | 104 | | | | 6 |
| 5 | ಮುತ್ತುಗದಹಳ್ಳಿ | 12.15 | 2018 | 15 | | | | 22 |
| 6 | ನೆಲಮಂಗಲ | 119.18 | 2010 | 21 | | | | 492 |
| | ಒಟ್ಟು | | | 314 | 0 | 0 | 0 | 570 |
| | **ರಾಮನಗರ ಜಿಲ್ಲೆ** | | | | | | | |
| 1 | ಕನಕಪುರ 1ನೇ ಹಂತ | 12.01 | 1988 | 18 | | | | 29 |
| 2 | ಕನಕಪುರ 2ನೇ ಹಂತ | 7.1 | 2009 | 0 | | | | 27 |
| 3 | ರಾಮನಗರ | 5 | 1957 | 27 | | | | 3 |
| 4 | ಮಾಗಡಿ | 14 | 1986 | 8 | | | | 37 |
| 5 | ತಗಚಗೆರೆ – ಚನ್ನಪಟ್ಟಣ | 14.27 | 2008 | 0 | | | | 22 |
| | ಒಟ್ಟು | | | 53 | 0 | 0 | 0 | 118 |
| | **ಚಿಕ್ಕಬಳ್ಳಾಪುರ ಜಿಲ್ಲೆ** | | | | | | | |
| 1 | ಮುದ್ದೇನಹಳ್ಳಿ | 7.31 | 1984 | 12 | | | | 7 |
| 2 | ಚಿಂತಾಮಣಿ | 19.11 | 1985 | 20 | | | | 6 |
| 3 | ಗೌರಿಬಿದನೂರು | 5.19 | 1987 | 8 | | | | 26 |
| 4 | ಶಿಡ್ಲಘಟ್ಟ | 17.2 | 1984 | 6 | | | | 4 |
| 5 | ಕುಡುಮಲಕುಂಟೆ–ಗೌರಿಬಿದನೂರು | 48.13 | 2011 | 49 | | | | 113 |
| | ಒಟ್ಟು | | | 95 | | | | 156 |

| ಮ ಸಂ | ಕೈಗಾರಿಕಾ ವಸಾಹತು | ಒಟ್ಟು ವಿಸ್ತೀರ್ಣ ಎಕರೆಗಳಲ್ಲಿ | ಕೈ.ವ. ಸ್ಥಾಪನಾ ವರ್ಷ | ಹಂಚಿಕೆ | | | | |
|---|---|---|---|---|---|---|---|---|
| | | | | ಮಳಿಗೆ | ಬಹುಮಹಡಿ ಕಟ್ಟಡ | ಅಂಗಡಿ | ಗೋದಾಮು | ನಿವೇಶನಗಳು |
| | **ಕೋಲಾರ ಜಿಲ್ಲೆ** | | | | | | | |
| 1 | ಕ್ಯಾಲನೂರು | 5 | 1994 | 10 | | | | 3 |
| 2 | ತಮಕ-ಕೋಲಾರ | 25.33 | 1983 | 31 | | | | 20 |
| 3 | ಮೈಸೂರು ಲ್ಯಾಂಪ್ಸ್ | 0 | | 0 | | | | 59 |
| 4 | ಕೆ.ಜಿ.ಎಫ್. | 14.37 | 1962 | 42 | | | | 9 |
| 5 | ಮಾಲೂರು | 6.34 | 1986 | 15 | | | | 17 |
| 6 | ಮುಳಬಾಗಿಲು | 5 | 1986 | 10 | | | | 12 |
| | ಒಟ್ಟು | | | 108 | | | | 120 |
| | **ತುಮಕೂರು ಜಿಲ್ಲೆ** | | | | | | | |
| 1 | ಕುಣಿಗಲ್ | 8.11 | 1986 | 16 | | | | 27 |
| 2 | ಮಧುಗಿರಿ | 6.37 | 1994 | 13 | | | | 20 |
| 3 | ಕಡಮಲಕುಂಟೆ ಪಾವಗಡ | 53.46 | 2010 | 10 | | | | 105 |
| 4 | ಸಿರಾ | 3.39 | 1968 | 15 | | | | 13 |
| 5 | ಯಲಿಯೂರು | 32.24 | 2004 | 0 | | | | 1 |
| 6 | ತಿಪಟೂರು | 10.03 | 1982 | 20 | | | | 41 |
| 7 | ಅಂತರಸನಹಳ್ಳಿ - 1 | 16 | 1981 | 18 | | | | 4 |
| 8 | ಅಂತರಸನಹಳ್ಳಿ - 2 | 34.22 | 2001 | 9 | | | | 145 |
| 9 | ಹಿರೇಹಳ್ಳಿ | 5.35 | 1985 | 20 | | | | 16 |
| 10 | ತುಮಕೂರು | 15.08 | 1965 | 32 | | | 1 | 41 |
| | ಒಟ್ಟು | | | 153 | 0 | 0 | 1 | 413 |
| | **ಚಿತ್ರದುರ್ಗ ಜಿಲ್ಲೆ** | | | | | | | |
| 1 | ಚಿತ್ರದುರ್ಗ | 10 | 1976 | 35 | | | | 18 |
| 2 | ಎಂ.ಕೆ.ಹಟ್ಟಿ | 8 | 2009 | 0 | | | | 27 |
| 3 | ಹಿರಿಯೂರು | 13.14 | 1981 | 7 | | | | 69 |
| 4 | ಹೊಸದುರ್ಗ | 9.36 | 1985 | 16 | | | | 59 |
| 5 | ಚಳ್ಳಕೆರೆ | 5 | 2015 | 24 | | | | 11 |
| 6 | ಉಳ್ಳಾರ್ಥಿಕಾವಲ್ | 250 | 2018 | 4 | | | | 28 |
| 7 | ಖುದಾಪುರ | 50 | 2018 | 7 | | | | 73 |
| | ಒಟ್ಟು | | | 93 | 0 | 0 | 0 | 285 |
| | **ದಾವಣಗೆರೆ ಜಿಲ್ಲೆ** | | | | | | | |
| 1 | ದಾವಣಗೆರೆ | 19.35 | 1974 | 52 | | | | 52 |
| 2 | ಹರಿಹರ 1ನೇ ಹಂತ | 23 | 1959 | 45 | | | | 35 |
| | ಹರಿಹರ 2ನೇ ಹಂತ | 20.09 | 1984 | 28 | | | | 144 |
| 3 | ಸಾರಥಿ | 28.26 | 2018 | 7 | | | | 61 |
| 4 | ಜಗಳೂರು | 9.36 | | 0 | | | | 0 |
| | ಒಟ್ಟು | | | 132 | 0 | 0 | 0 | 292 |
| | **ಮೈಸೂರು ಜಿಲ್ಲೆ** | | | | | | | |
| 1 | ಹುಣಸೂರು | 11.45 | 1977 | 18 | | | | 37 |
| 2 | ಹೆಬ್ಬಾಳ | 75.49. | 1984 | 152 | | | | 231 |
| 3 | ಮೇಟಗಳ್ಳಿ | 12.95 | 1981 | 84 | | | | 5 |
| 4 | ಯಾದವಗಿರಿ 1ನೇ ಹಂತ | 42.29 | 1963 | 237 | | | 30 | 30 |
| 5 | ನಂಜನಗೂಡು | 5.05 | 1981 | 31 | | | | 2 |
| 6 | ಹಿನಕಲ್ | 2.91 | 2001 | 0 | | | | 0 |
| 7 | ಸೀಗೂರು | 17.35 | 1979 | 12 | | | 2 | 0 |
| | ಒಟ್ಟು | | | 534 | 0 | | 32 | 305 |

| ಮ ಸಂ | ಕೈಗಾರಿಕಾ ವಸಾಹತು | ಒಟ್ಟು ವಿಸ್ತೀರ್ಣ ಎಕರೆಗಳಲ್ಲಿ | ಕೈ.ವ. ಸ್ಥಾಪನಾ ವರ್ಷ | ಹಂಚಿಕೆ | | | | |
|---|---|---|---|---|---|---|---|---|
| | | | | ಮಳಿಗೆ | ಬಹುಮಹಡಿ ಕಟ್ಟಡ | ಅಂಗಡಿ | ಗೋದಾಮು | ನಿವೇಶನಗಳು |
| | **ಮಂಡ್ಯ ಜಿಲ್ಲೆ** | | | | | | | |
| 1 | ಸೋಮನಹಳ್ಳಿ | 3.46 | 1997 | 7 | | | | 21 |
| 2 | ಮಂಡ್ಯ 1ನೇ ಹಂತ | 10.67 | 1975 | 44 | | | | 19 |
| 3 | ಮಂಡ್ಯ 2ನೇ ಹಂತ | 6.16 | 1978 | 28 | | | | 3 |
| 4 | ನಾಗಮಂಗಲ | 7.77 | 1996 | 11 | | | | 0 |
| 5 | ಪಾಂಡವಪುರ | 5 | 1985 | 15 | | | | 16 |
| 6 | ಶ್ರೀರಂಗಪಟ್ಟಣ | 5 | 1982 | 38 | | | | 5 |
| 7 | ತೂಬಿನಕೆರೆ | 9.8 | 1996 | 0 | | | | 50 |
| | ಒಟ್ಟು | | | 143 | | | | 114 |
| | **ಚಾಮರಾಜನಗರ ಜಿಲ್ಲೆ** | | | | | | | |
| 1 | ಗುಂಡ್ಲುಪೇಟೆ | 10 | 2007 | 3 | | | | 45 |
| 2 | ಚಾಮರಾಜನಗರ | 9 | 2007 | 14 | | | | 34 |
| 3 | ಕೊಳ್ಳೆಗಾಲ | 7.48 | 1967 | 24 | | | | 16 |
| | ಒಟ್ಟು | | | 41 | 0 | | | 95 |
| | **ಕೊಡಗು ಜಿಲ್ಲೆ** | | | | | | | |
| 1 | ಮಡಿಕೇರಿ | 4.74 | 1968 | 22 | | | | 6 |
| 2 | ಕುಶಾಲನಗರ | 5.99 | 1986 | 16 | | | | 22 |
| 3 | ಕುಶಾಲನಗರ 2ನೇ ಹಂತ | 2.03 | 2010 | 0 | | | | 17 |
| | ಒಟ್ಟು | | | 38 | 0 | | | 45 |
| | **ಶಿವಮೊಗ್ಗ ಜಿಲ್ಲೆ** | | | | | | | |
| 1 | ಭದ್ರಾವತಿ | 5 | 1977 | 20 | | | | 2 |
| 2 | ಹೊಸನಗರ | 4.8 | 2000 | 0 | | | | 36 |
| 3 | ಕೆರೆಹಳ್ಳಿ(ಹೊಸನಗರ) | 4 | 2017 | 0 | | | | 6 |
| 4 | ಸಾಗರ | 10 | 1980 | 40 | | | | 35 |
| | ಸಾಗರ ಆಟೋ ಕಾಂಪ್ಲೆಕ್ಸ್ | 4.21 | 2000 | 0 | | | | 67 |
| 5 | ಯಲಗಳಲೆ(ಸಾಗರ) | 18 | 2017 | 6 | | | | 91 |
| 6 | ಮಂಡ್ಲಿ–ಕಲ್ಲೂರು | 10 | 1992 | 19 | | | | 38 |
| 7 | ಶಿವಮೊಗ್ಗ | 30.23 | 1965 | 99 | 19 | | | 81 |
| 8 | ಸಿದ್ಲಿಪುರ (ಶಿವಮೊಗ್ಗ) | 65.18 | 2017 | 23 | | | | 151 |
| 9 | ಶಿರಾಳಕೊಪ್ಪ | 5 | 1964 | 6 | | | | 7 |
| 10 | ಹಿರೇಕಶಕುನ–ಸೊರಬ | 20 | 2017 | 10 | | | | 59 |
| | ಒಟ್ಟು | | | 223 | 19 | | | 573 |
| | **ಚಿಕ್ಕಮಗಳೂರು ಜಿಲ್ಲೆ** | | | | | | | |
| 1 | ಚಿಕ್ಕಮಗಳೂರು | 13.45 | 1972 | 23 | | | | 76 |
| 2 | ನರಸಿಂಹರಾಜಪುರ | 10 | 2006 | 0 | | | | 0 |
| 3 | ಕಡೂರು – ಬೀರೂರು | 11.25 | 1962 | 14 | | | | 42 |
| | ಒಟ್ಟು | | | 37 | 0 | | | 118 |
| | **ಹಾಸನ ಜಿಲ್ಲೆ** | | | | | | | |
| 1 | ಅರಸೀಕೆರೆ | 13.14 | 1982 | 8 | | | | 33 |
| 2 | ಗಂಡಸಿ | 3.5 | 1997 | 6 | | | | 18 |
| 3 | ಬೇಲೂರು | 10 | 1996 | 0 | | | | 6 |
| 4 | ಚನ್ನರಾಯಪಟ್ಟಣ | 2 | 1984 | 10 | | | | 4 |
| 5 | ಹಾಸನ | 25.25 | 1966 | 62 | | | | 69 |
| 6 | ಹೊಳೆನರಸೀಪುರ | 5 | 1982 | 18 | | | | 10 |
| 7 | ಸಕಲೇಶಪುರ | 10 | 1975 | 12 | | | | 39 |
| | ಒಟ್ಟು | | | 116 | 0 | | | 179 |

| ಮ ಸಂ | ಕೈಗಾರಿಕಾ ವಸಾಹತು | ಒಟ್ಟು ವಿಸ್ತೀರ್ಣ ಎಕರೆಗಳಲ್ಲಿ | ಕೈ.ವ. ಸ್ಥಾಪನಾ ವರ್ಷ | ಹಂಚಿಕೆ | | | | |
|---|---|---|---|---|---|---|---|---|
| | | | | ಮಳಿಗೆ | ಬಹುಮಹಡಿ ಕಟ್ಟಡ | ಅಂಗಡಿ | ಗೋದಾಮು | ನಿವೇಶನಗಳು |
| | **ದಕ್ಷಿಣಕನ್ನಡ ಜಿಲ್ಲೆ** | | | | | | | |
| 1 | ಮೂಡಬಿದರೆ | 9.88 | 1982 | 8 | | | | 48 |
| 2 | ಬೆಳ್ತಂಗಡಿ | 0.9 | 1992 | 9 | | | | 1 |
| 3 | ಬೈಂಕಪಾಡಿ | 38.59 | 1971 | 179 | | | | 56 |
| 4 | ಮುಲ್ಕಿ | 4 | 1993 | 14 | | | | 5 |
| 5 | ಯಯ್ಯಾಡಿ | 17.58 | 1960 | 58 | | | 16 | 35 |
| | ಒಟ್ಟು | 70.95 | | 268 | | | 16 | 145 |
| | **ಉಡುಪಿ ಜಿಲ್ಲೆ** | | | | | | | |
| 1 | ಕಾರ್ಕಳ | 10 | 1979 | 7 | | | | 16 |
| 2 | ಕೋಟೇಶ್ವರ | 6.2 | 1990 | 12 | | | | 23 |
| 3 | ಮಣಿಪಾಲ | 13.91 | 1982 | 56 | | | | 37 |
| | ಒಟ್ಟು | | | 75 | | | | 76 |
| | **ಧಾರವಾಡ ಜಿಲ್ಲೆ** | | | | | | | |
| 1 | ಲಕ್ಕಮ್ಮನಹಳ್ಳಿ | 3.47 | 1982 | 32 | | | | 4 |
| 2 | ಹುಬ್ಬಳ್ಳಿ (ಎಂ.ಟಿ.ಎಸ್) | 123.1 | 1958 | 502 | | | 23 | 310 |
| 3 | ಗೋಕುಲ ಗ್ರಾಮ | 27.58 | 1998 | 44 | | | | 0 |
| 4 | ರಾಮನಕೊಪ್ಪ | 21.27 | 1992 | 14 | | | | 64 |
| 5 | ಬೇಲೂರು–ಧಾರವಾಡ | 17 | 2011 | 0 | | | | 74 |
| 6 | ಗಾಮನಗಟ್ಟಿ | 64.06 | 2010 | 19 | | | | 333 |
| | ಒಟ್ಟು | | | 611 | 0 | 0 | 23 | 785 |
| | **ಗದಗ ಜಿಲ್ಲೆ** | | | | | | | |
| 1 | ಬೆಟಗೇರಿ | 7.08 | 1995 | 10 | | | | 46 |
| 2 | ಗದಗ | 11.92 | 1970 | 16 | | | | 51 |
| 3 | ಮುಂಡರಗಿ – ಗದಗ | 7 | 1996 | 0 | | | | 51 |
| 4 | ಗಜೇಂದ್ರಗಡ | 5 | 1991 | 0 | | | | 43 |
| 5 | ರೋಣ | 5 | 1991 | 8 | | | | 42 |
| 6 | ಲಕ್ಷ್ಮೇಶ್ವರ | 9.15 | 2000 | 0 | | | | 55 |
| | ಒಟ್ಟು | | | 34 | 0 | 0 | 0 | 288 |
| | **ಹಾವೇರಿ ಜಿಲ್ಲೆ** | | | | | | | |
| 1 | ಹಾವೇರಿ | 3.38 | 1992 | 10 | | | | 27 |
| 2 | ಹಿರೆಕೆರೂರು | 5 | 1994 | 4 | | | | 30 |
| 3 | ರಾಣಿಬೆನ್ನೂರು–1 | 6 | 1982 | 10 | | | | 13 |
| 4 | ರಾಣಿಬೆನ್ನೂರು–2 | 10 | 2011 | 0 | | | | 48 |
| 5 | ಸವಣೂರು | 15 | 1997 | 0 | | | | 112 |
| 6 | ಶಿಗ್ಗಾಂವ | 11.37 | 1993 | 8 | | | | 60 |
| 7 | ಬ್ಯಾಡಗಿ | 5 | 2001 | 0 | | | | 0 |
| | ಒಟ್ಟು | | | 32 | 0 | 0 | 0 | 290 |
| | **ಉತ್ತರ ಕನ್ನಡ ಜಿಲ್ಲೆ** | | | | | | | |
| 1 | ಭಟ್ಕಳ | 3 | 1991 | 10 | | | | 17 |
| 2 | ದಾಂಡೇಲಿ | 20 | 1964 | 20 | | | | 48 |
| 3 | ಹಲಿಯಾಳ | 10 | 1983 | 10 | | | | 57 |
| 4 | ಕಾರವಾರ | 4 | 1991 | 10 | | | | 38 |
| 5 | ಕುಮಟ | 20 | 1982 | 28 | | | | 123 |
| 6 | ಸಿರಸಿ | 20 | 1994 | 34 | | | | 74 |
| 7 | ರಾಮನಗರ–ಸೂಪ | 17.03 | 1982 | 0 | | | | 78 |
| 8 | ಯಲ್ಲಾಪುರ | 9 | 1989 | 0 | | | | 53 |
| | ಒಟ್ಟು | | | 112 | 0 | 0 | 0 | 488 |

| ಕ್ರ ಸಂ | ಕೈಗಾರಿಕಾ ವಸಾಹತು | ಒಟ್ಟು ವಿಸ್ತೀರ್ಣ ಎಕರೆಗಳಲ್ಲಿ | ಕೈ.ವ. ಸ್ಥಾಪನಾ ವರ್ಷ | ಹಂಚಿಕೆ | | | | |
|---|---|---|---|---|---|---|---|---|
| | | | | ಮಳಿಗೆ | ಬಹುಮಹಡಿ ಕಟ್ಟಡ | ಅಂಗಡಿ | ಗೋದಾಮು | ನಿವೇಶನಗಳು |
| | **ಬೆಳಗಾವಿ ಜಿಲ್ಲೆ** | | | | | | | |
| 1 | ಬೈಲಹೊಂಗಲ | 3 | 1991 | 8 | | | | |
| 2 | ಕಣಬುರ್ಗಿ | 6 | 1997 | 14 | | | | 42 |
| 3 | ಅನಗೋಳ-1 | 21 | 1983 | 130 | | | | 3 |
| 4 | ಅನಗೋಳ-2 | 4.6 | 2004 | 10 | | | | 3 |
| 5 | ಉದ್ಯಮ್‌ಬಾಗ್ | 55.16 | 1958 | 100 | | | 15 | 78 |
| | ಉದ್ಯಮ್‌ಬಾಗ್ (ತಾ.ಕೈ.ಸಂ) | 0.32 | 2007 | 61 | 38 | 23 | | 0 |
| 6 | ಚಿಕ್ಕೋಡಿ | 6 | 1999 | 4 | | | | 36 |
| 7 | ಗೋಕಾಕ್ | 9.62 | 1982 | 24 | | | | 35 |
| 8 | ದೇಸೂರು | 41.34 | 2007 | 0 | | | | 49 |
| 9 | ಖಾನಾಪುರ | 9.57 | 1985 | 22 | | | | 24 |
| 10 | ರಾಮದುರ್ಗ | 9.4 | 1992 | 4 | | | | 2 |
| 11 | ನಿಪ್ಪಾಣಿ | 3.5 | 1993 | 8 | | | | 9 |
| 12 | ಅಥಣಿ | 28 | 2007 | 8 | | | | 56 |
| 13 | ಖಾಗಾವಾಡ | 20 | 1989 | 0 | | | | 1 |
| 14 | ಕಂಗ್ರಾಳಿ | 2.5 | 2008 | 0 | | | | 1 |
| 15 | ಬೊರ್‌ಗಾಂವ್ | 75 | 2013 | 13 | | | | 200 |
| | ಒಟ್ಟು | | | 406 | 38 | 23 | 15 | 539 |
| | **ವಿಜಯಪುರ ಜಿಲ್ಲೆ** | | | | | | | |
| 1 | ವಿಜಯಪುರ | 19.5 | 1967 | 50 | | | 6 | 52 |
| 2 | ಮಹಲ್‌ಬಾಗಾಯತ್ | 15.17 | 1996 | 22 | | | | 79 |
| 3 | ಮುದ್ದೇಬಿಹಾಳ್ | 6 | 1978 | 0 | | | | 0 |
| 4 | ಸಿಂದಗಿ | 28.36 | 2007 | 15 | | | | 100 |
| | ಒಟ್ಟು | | | 87 | 0 | 0 | 6 | 231 |
| | **ಬಾಗಲಕೋಟೆ ಜಿಲ್ಲೆ** | | | | | | | |
| 1 | ಬಾಗಲಕೋಟೆ - 1 | 14.32 | 1982 | 44 | | | | 47 |
| 2 | ಬಾಗಲಕೋಟೆ-2 (ನವನಗರ) | 9.7 | 2011 | 0 | | | | 51 |
| 3 | ಜಮಖಂಡಿ | 19.17 | 1970 | 20 | | | | 40 |
| 4 | ಹುನಗುಂದ | 20.32 | 2000 | 0 | | | | 50 |
| 5 | ಮುಧೋಳ್ | 11 | 1996 | 4 | | | | 39 |
| .6 | ಅಸಂಗಿ(ಬನಹಟ್ಟಿ) | 9.47 | 1988 | 4 | | | | 0 |
| | ಒಟ್ಟು | | | 72 | 0 | 0 | 0 | 227 |
| | **ಕಲಬುರಗಿ ಜಿಲ್ಲೆ** | | | | | | | |
| 1 | ಆಳಂದ | 10 | 1985 | 4 | | | | 55 |
| 2 | ಚಿಂಚೋಳಿ | 10 | 1985 | 1 | | | | 22 |
| 3 | ಚಿತ್ತಾಪುರ-1 | 15 | 1987 | 8 | | | | 41 |
| | ಚಿತ್ತಾಪುರ-2 | 27.35 | 2015 | 0 | | | | 0 |
| 4 | ಶಹಬಾದ್-1 | 10.5 | 1977 | 7 | | | | 43 |
| 5 | ಶಹಬಾದ್-2(*) | 10 | 2011 | 0 | | | | 31 |
| 6 | ಕಲಬುರಗಿ | 17.3 | 1962 | 47 | | 88 | 2 | 51 |
| 7 | ಕಪನೂರು - 1 | 35.5 | 1984 | 63 | | | | 130 |
| 8 | ಕಪನೂರು - 2 | 11.5 | 1997 | 0 | | | | 64 |
| 9 | ಜೇವರ್ಗಿ | 10 | 1995 | 0 | | | | 21 |
| 10 | ಸೇಡಂ | 16.7 | 1990 | 8 | | | | 92 |
| | ಒಟ್ಟು | | | 138 | 0 | 88 | 2 | 550 |

| ಮ ಸಂ | ಕೈಗಾರಿಕಾ ವಸಾಹತು | ಒಟ್ಟು ವಿಸ್ತೀರ್ಣ ಎಕರೆಗಳಲ್ಲಿ | ಕೈ.ವ. ಸ್ಥಾಪನಾ ವರ್ಷ | ಹಂಚಿಕೆ | | | | |
|---|---|---|---|---|---|---|---|---|
| | | | | ಮಳಿಗೆ | ಬಹುಮಹಡಿ ಕಟ್ಟಡ | ಅಂಗಡಿ | ಗೋದಾಮು | ನಿವೇಶನಗಳು |
| | **ಯಾದಗಿರಿ ಜಿಲ್ಲೆ** | | | | | | | |
| 1 | ಶಹಪುರ | 26.8 | 1991 | | | | | 200 |
| 2 | ಶೋರಾಪುರ | 10 | 1984 | 4 | | | | 22 |
| | ಒಟ್ಟು | | | 4 | 0 | 0 | 0 | 222 |
| | **ಬೀದರ್ ಜಿಲ್ಲೆ** | | | | | | | |
| 1 | ಬಾಲ್ಕಿ-ಬೀದರ | 3.85 | 1984 | 8 | | | | 9 |
| 2 | ಗಾಂಧಿಗಂಜ್ – ಬೀದರ್ | 11.2 | 1969 | 22 | | | | 61 |
| 3 | ಕೊಲ್ಹಾರ್ – ಬೀದರ್ | 30 | 1992 | 9 | | | | 120 |
| 4 | ನವಬಾದ್ – ಬೀದರ್ | 10 | 1981 | 36 | | | | 62 |
| 5 | ಚಿಟಗುಪ್ಪ | 4 | 1984 | 0 | | | | 0 |
| 6 | ಹುಮನಾಬಾದ್-1 | 4.5 | 1985 | 22 | | | | 30 |
| 7 | ಹುಮನಾಬಾದ್-2 | 22.57 | 2010 | 8 | | | | 88 |
| 8 | ತಾನಕುಶನೂರ್ | 2 | 1985 | 0 | | | | 13 |
| 9 | ಬಸವಕಲ್ಯಾಣ | 5 | 2007 | 0 | | | | 32 |
| | ಒಟ್ಟು | | | 105 | 0 | 0 | 0 | 415 |
| | **ಬಳ್ಳಾರಿ ಜಿಲ್ಲೆ** | | | | | | | |
| 1 | ಬಳ್ಳಾರಿ | 15.75 | 1968 | 49 | | | | 35 |
| 2 | ಹೂವಿನಹಡಗಲಿ | 5.28 | 1983 | 0 | | | | 34 |
| 3 | ಹೊಸಪೇಟೆ | 24.95 | 1972 | 55 | | | | 134 |
| 4 | ಮುಂಡರಗಿ – ಬಳ್ಳಾರಿ | 7.19 | 1974 | 4 | | | | 46 |
| 5 | ಸಿರಗುಪ್ಪ | 3.82 | 1990 | 4 | | | | 18 |
| 6 | ಸಂಡೂರು | 18 | 2008 | 0 | | | | 0 |
| 7 | ಹರಗಿನದೋಣಿ(ಕುಡುತಿನಿ) | 100 | 2017 | 0 | | | | 0 |
| | ಒಟ್ಟು | | | 112 | | | | 267 |
| | **ರಾಯಚೂರು ಜಿಲ್ಲೆ** | | | | | | | |
| 1 | ಲಿಂಗಸುಗೂರು | 5 | 1984 | 4 | | | | 19 |
| 2 | ರಾಯಚೂರು | 25 | 1980 | 49 | | | | 69 |
| 3 | ಯರಮರಸ್ | 10 | 1974 | 4 | | | | 45 |
| 4 | ಸಿಂಧನೂರು | 22 | 1997 | 0 | | | | 77 |
| | ಒಟ್ಟು | | | 57 | | | | 210 |
| | **ಕೊಪ್ಪಳ ಜಿಲ್ಲೆ** | | | | | | | |
| 1 | ಗಂಗಾವತಿ | 30 | 1991 | 4 | | | | |
| 2 | ಬಸಾಪುರ | 104 | 2017 | 0 | | | | 157 |
| | ಒಟ್ಟು | | | 4 | | | | 157 |
| | ಒಟ್ಟಾರೆ | | | 5905 | 233 | 111 | 233 | 8867 |

ವ್ಯವಸ್ಥಾಪಕ ನಿರ್ದೇಶಕರು